www.ecourtsindia.com

ಭದ್ರಾವತಿಯ **1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ.

ಸಿ.ಸಿ.ಸಂಖ್ಯೆ: 2246/2024

ಫಿರ್ಯಾದಿಃ ಹೊಳೆ ಹೊನ್ನೂರು ಪೊಲೀಸ್ ಠಾಣೆ,
ಭದ್ರಾವತಿ.

- ವಿರುದ್ಧ -

1 ನೇ ಆರೋಪಿ ಮಹೇಶ ಯಾನೆ ಮಚ್ಚಾ ಬಿನ್ ಲೇಟ್ ಹನುಮಂತಪ್ಪ,
ವಾಸಃ ದುರ್ಗಮ್ಮ ದೇವಸ್ಥಾನದ ಹತ್ತಿರ, ಅಶೋಕ ನಗರ
ಭದ್ರಾವತಿ

ದೋಷಾರೋಪಣೆ

ನಾನು ರವಿ ಕುಮಾರ ವಿ. ಬಿ.ಎ.ಎಲ್., ಎಲ್.ಎಲ್.ಬಿ. C/c ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ ದಂಡಾಧಿಕಾರಿಗಳು ಭದ್ರಾವತಿ, ಆದ ನಾನು ಈ ಮೂಲಕ ಮೇಲೆ ಹೆಸರಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ 28.04.2018 ರಂದು ಬೆಳಿಗ್ಗೆ ಚಾಸಾ-1 ಯೊಗೇಂದ್ರಪ್ಪ ರವರು ಭದ್ರಾವತಿ ತಾಲ್ಲೂಕು ಅಶೋಕ ನಗರ-1 ಗ್ರಾಮದಲ್ಲಿರುವ ತಮ್ಮ ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಸಿಗಂಧೂರು, ಕೊಲ್ಲೂರು, ಧರ್ಮಸ್ಥಳ ಇತರೆ ಕಡೆಗಳಿಗೆ ದೇವರ ದರ್ಶನಕ್ಕೆ ಹೋಗಿ ದಿನಾಂಕಃ 30.04.2018 ರಂದು ಬೆಳಗಿನ ಜಾವ 1.00 ಗಂಟೆಗೆ ವಾಪಸ್ ಮನೆಗೆ ಬಂದಾಗ ಈ ಮಧ್ಯದ ರಾತ್ರಿ ಸಮಯದಲ್ಲಿ 1 ನೇ ಆರೋಪಿಯಾದ ನೀವು ಸಿ.ಸಿ ಸಂಖ್ಯೆ 1711-2018 ರಲ್ಲಿ ಕುಲಾಸೆ ಗೊಂಡ 02 ನೇ ಆರೋಪಿಯೊಂದಿಗೆ ಸೇರಿ ಚಾಸಾ-1 ರವರ ಮನೆಗೆ ಸೇರಿದ ಅಡಿಗೆ ಕೋಣೆ ಬಳಿಯ ಮೇಲ್ಚಾವಣಿಯ ಹೆಂಚುಗಳನ್ನು ತೆಗೆದು ಚಾಸಾ-1 ರವರ ಮನೆಗೆ ಅಕ್ರಮ ಪ್ರವೇಶ ಮಾಡುವುದರ ಮೂಲಕ

This is a True Copy of the Court Records Online. Authenticated @ districts.ecourtsindia.com/cnr/KASM310031212024/truecopy/order-1.pdf

ಭಾರತೀಯ ದಂಡ ಸಂಹಿತೆ ಕಲಂ. 457 ರ ಅಡಿಯಲ್ಲಿ 1 ನೇ ಆರೋಪಿಯಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದೂ,

ಕೊನೆಯದಾಗಿ, ಮೇಲ್ಕಂಡ ಅದೇ ದಿನಾಂಕ, ಸ್ಥಳ ಮತ್ತು ಸಮಯದಂದು 1 ನೇ ಆರೋಪಿಯಾದ ನೀವು ಸಿ.ಸಿ ಸಂಖ್ಯೆ 1711-2018 ರಲ್ಲಿ ಕುಲಾಸೆ ಗೊಂಡ 02 ನೇ ಆರೋಪಿಯೊಂದಿಗೆ ಸೇರಿ ಚಾಸಾ-1 ಯೋಗೇಂದ್ರಪ್ಪ ರವರ ಮನೆಗೆ ಅಕ್ರಮ ಪ್ರವೇಶ ಮಾಡಿ ಬೆಡ್ ರೂಂನಲ್ಲಿ ಇಟ್ಟಿದ್ದ ಅಲ್ಮೇರಾ ಬೀಗವನ್ನು ಅದರ ಕೀಯಿಂದ ತೆಗೆದು ಅದರಲ್ಲಿಟ್ಟಿದ್ದ ಬೆಳ್ಳಿ ಬಂಗಾರದ ಒಡವೆಗಳು ಹಾಗೂ ಹಣವನ್ನು ಕಳುವು ಮಾಡಿಕೊಂಡು ಹೋಗಿರುತ್ತೀರಾ ಆದ್ದರಿಂದ 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ. 380 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು,

ಹಾಗೂ ನೀವು ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

ದಿನಾಂಕಃ 14-08-2025 C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಭದ್ರಾವತಿ.

1 ನೇ ಆರೋಪಿ ಸಹಿಃ

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KASM310031212024/truecopy/order-1.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.**

ಸಿ.ಸಿ.ನಂಃ 2246/2024

1 ನೇ ಆರೋಪಿ ಹೆಸರುಃ ಮಹೇಶ

1. ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ದೊಷಾರೋಪಣೆಯ ಸಾರಾಂಶವನ್ನು ಕೇಳಿ ತಿಳಿದು ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರಃ ಹೌದು,

2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ವಿಚಾರಣೆಯಾಗ ಬಯಸುತ್ತೀರಾ?
ಉತ್ತರಃ ಇಲ್ಲ, ವಿಚಾರಣೆ ಆಗಬಯಸುತ್ತೇನೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 14-08-2025

C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಭದ್ರಾವತಿ.

1 ನೇ ಆರೋಪಿ ಸಹಿಃ

This is a True Copy of the Court Records Online. Authenticated @ districts.ecourtsindia.com/cnr/KASM310031212024/truecopy/order-1.pdf